ಸಾಕ್ಷಿಯನ್ನು ಇಂದು ದಿನಾಂಕ: **01.09.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟಿ ಸವಾಲು:** ವಾದಿ ಪರ ಶ್ರೀ **ಕೆ.ಎಸ್.ಎಂ** ವಕೀಲರಿಂದ:

ನಿಡಿ-**1** ಮತ್ತು **2** ಪೋಟೋಗಳಲ್ಲಿ ವಾದಿಯ ದಾವಾ-ಎ ಷೆಡ್ಯೂಲ್ ಸ್ವತ್ತಿನಲ್ಲಿ ಮಣ್ಣು ತೆಗೆಯುತ್ತಿರುವ ಪೋಟೋ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿಯವರು ನಮ್ಮ ಜಮೀನಿನ ಮಣ್ಣನ್ನು ಸಹ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ.

ಈ ದಾವೆಯ ಎಲ್ಲಾ ವಿದ್ಯುಮಾನಗಳು ನನಗೆ ತಿಳಿದಿರುತ್ತವೆ ಎಂದರೆ ಸರಿ. ಈ ದಾವೆಯಲ್ಲಿ ವಾದಿಯ ಪರವಾಗಿ ನ್ಯಾಯಾಲಯವು ಮಧ್ಯಂತರ ತಾತ್ಕಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಿತ್ತು ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸಲ್ಲಿಸಿದ  ಮೇಲ್ಮನವಿ  ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಆಗಿರಬಹುದು ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದು ನನ್ನ ವಕೀಲರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ.

ನಾನು ದಾವಾ-ಬಿ ಷೆಡ್ಯೂಲ್ ಆಸ್ತಿಯನ್ನು ಯಾವಾಗ ಖರೀದಿ ಮಾಡಿರುತ್ತೇನೆ ಎನ್ನುವುದು ನನಗೆ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರಿದು ಪತ್ರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಸುಮಾರು **20** ವರ್ಷಗಳಾಗಿರುತ್ತದೆ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಬ್ಯಾಂಕಿನಲ್ಲಿ ಆಧಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಬ್ಯಾಂಕಿನಲ್ಲಿ ಕ್ರಯ ಪತ್ರವನ್ನು ನೀಡುವುದಿಲ್ಲ ಬರಿ ಪಹಣಿ ಪತ್ರಿಕೆಯನ್ನು ನೀಡುತ್ತಾರೆ ಮತ್ತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ಉಪನೋಂದಣಾಧಿಕಾರಿ ಕಚೇರಿಯಲ್ಲಿ ದೃಡೀಕೃತ ನಕಲನ್ನು ಪಡೆದುಕೊಂಡು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯು ದಾವಾ-ಎ ಷೆಡ್ಯೂಲ್ ಆಸ್ತಿಯಲ್ಲಿ ಕೊಳವೆ ಬಾವಿ ತೆಗೆಸಿದ್ದರೂ ಸಹ ನಾವು ತೆಗೆಸಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಳವೆ ಬಾವಿ ತೆಗೆಸಿರುವ ಬಾಬ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ-ಎ ಷೆಡ್ಯೂಲ್ ಆಸ್ತಿಗಳಲ್ಲಿ ವಾದಿ ಭತ್ತ ಮತ್ತು ಸೀಮೆಹುಲ್ಲು ಬೆಳೆದಿರುತ್ತಾರೆ ಎಂದರೆ ಸರಿ. ದಾವಾ-ಎ ಷೆಡ್ಯೂಲ್ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು, ಮಾಲೀಕತ್ವ ಹಾಗೂ ಸ್ವಾಧೀನ ಇರದಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ:</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**